ಪಿಡಬ್ಲೂ – 1

<u>ದಿನಾಂಕಃ 05.03.2020 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಪಾಟೀ ಸವಾಲುಃ ಶ್ರೀ ಕೆ ಜಿ ಡಿ ವಕೀಲರಿಂದಃ–</u>

ನಾನು ಹುಟ್ಟಿ ಬೆಳೆದಿರುವುದು ಹಾಗೂ ವಾಸ ಮಾಡಿಕೊಂಡಿರುವುದು ಬೆಂಗಳೂರಿನಲ್ಲಿ ಎಂದರೆ ಸರಿ. ದಾವಾ ಆಸ್ತಿಯ ಮೂಲ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನಿನು ಎಷ್ಟು ವಿಸ್ತೀರ್ಣ ಇತ್ತು ಎಂಬುದು ಸಹ ನನಗೆ ಗೊತ್ತಿಲ್ಲ. ನನ್ನ ತಂದೆ ನನ್ನ ಹೆಸರಿಗೆ ಬರೆದುಕೊಟ್ಟಿರುವ ದಾನ ಪತ್ರದಲ್ಲಿ 3 ಆಸ್ತಿಗಳು ನಮೂದು ಆಗಿರುತ್ತದೆ

ಎಂದರೆ ಸರಿ.  ಸದರಿ ದಾನ ಪತ್ರದಲ್ಲಿ 3 ಆಸ್ತಿಗಳಿಗೆ ಒಂದೇ ಚೆಕ್ಕುಬಂದಿಯನ್ನು ಕಾಣಿಸಲಾಗಿದೆ ಎಂದರೆ ಸಾಕ್ಷಿ ಪ್ರತ್ಯೇಕವಾಗಿ ಚೆಕ್ಕುಬಂದಿಯನ್ನು ಕಾಣಿಸಲಾಗಿದೆ ಎಂದು ನುಡಿಯುತ್ತಾರೆ. ಆ ರೀತಿ ಪ್ರತ್ಯೇಕವಾಗಿ ಚೆಕ್ಕು ಬಂದಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನನ್ನ ತಂದೆ ಕ್ರಯಕ್ಕೆ ಕೊಂಡಿದ್ದರು  ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.  ದಾವಾ ಆಸ್ತಿ ಯಾವ ಇಸವಿಯಲ್ಲಿ ಪೋಡಿಯಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಆಸ್ತಿಯನ್ನು ಖರೀದಿ ಮಾಡುವ ಮೊದಲೇ ಪೋಡಿ ಆಗಿತ್ತು ಎಂದು ನುಡಿಯುತ್ತಾರೆ. ಪೋಡಿಗೆ ಸಂಬಂದಿಸಿದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸದರಿ ಪೋಡಿ ದಾಖಲೆಗಳನ್ನು ನೋಡಿ ಪರಿಶೀಲಿಸಿರುತ್ತೇನೆ.  ಸದರಿ ಪೋಡಿ ದಾಖಲೆಗಳಲ್ಲಿ ದಾವಾ ಆಸ್ತಿ ಒತ್ತುವರಿ ಆಗಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಸರ್ವೆ ಮಾಡಿಸಿದಾಗ ಸರ್ವೆ ದಾಖಲೆಯಲ್ಲಿ ಒತ್ತುವರಿ ಆಗಿರುವ ಬಗ್ಗೆ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನ್ನನ ಜಮೀನನ್ನು ಹದ್ದುಬಸ್ತು ಮಾಡಲು ಅರ್ಜಿಯನ್ನು ನೀಡಿದಾಗ ಸರ್ವೆ ಅಧಿಕಾರಿಗಳು ಆಜುಬಾಜುವಿನ ಜಮೀನುದಾರರಿಗೆ ನೋಟಿಸು ನೀಡಿದ್ದರು ಎಂದರೆ ಸರಿ.  ಆ ರೀತಿ ನೀಡಿದ ನೋಟಿಸು ಪ್ರತಿವಾದಿಗೆ ಜಾರಿ ಆಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ರೀತಿ ಅವರಿಗೆ ನೋಟಿಸು ಜಾರಿಯಾಗಿದ್ದು ಸರ್ವೆ ಸಮಯದಲ್ಲಿ ಅವರು ಸಹ ಸ್ಥಳದಲ್ಲಿ ಹಾಜರಿದ್ದರು ಎಂದು ನುಡಿಯುತ್ತಾರೆ.  ನೋಟಿಸು ಜಾರಿ ಅಗಿತ್ತು ಮತ್ತು ಪ್ರತಿವಾದಿ ಸ್ಥಳದಲ್ಲಿ ಹಾಜರಿದ್ದರು ಎಂದು ತೋರಿಸುವ ಬಗ್ಗೆ ಸರ್ವೆ ಇಲಾಖೆಯಿಂದ ನಾನು ದಾಖಲೆಗಳ ದೃಡೀಕೃತ ನಕಲನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.  ಆ ರೀತಿ ದಾಖಲೆಗಳನ್ನು ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ನಿಪಿ 6 ರಲ್ಲಿ ಪ್ರತಿವಾದಿ ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ಸರ್ವೆ ಅಧಿಕಾರಿಗಳು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 7 ಕಾಲು ಗುಂಟೆ ಜಮೀನು ಒತ್ತುವರಿ ಮಾಡಿರುವುದಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ 6 ನ್ನು ತೋರಿಸಿ ಅದರಲ್ಲಿ ಒತ್ತುವರಿ ಬಗ್ಗೆ ನಮೂದು ಇರುವ ಬಗ್ಗೆ ಕಾಣುತ್ತಿಲ್ಲ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲೆಯಲ್ಲಿ ಕೊನೆಯ ಲೈನು ಪ್ರಿಂಟ್ ಆಗದೆ ಬಿಟ್ಟು ಹೋಗಿರುತ್ತದೆ ಎಂದು ನುಡಿಯತ್ತಾರೆ.

ಪ್ರತಿವಾದಿಯು 2014 ನೇ ಇಸವಿಯಲ್ಲಿ ರಾಘವೇಂದ್ರ ಕೆ ಎಂ ಎಂಬುವವರಿಂದ ಸ.ನಂ 436/3 ರಲ್ಲಿ 1 ಎಕರೆ ಖುಷ್ಕಿ ಜಮೀನು ಖರೀದಿ ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆ ರೀತಿ ಖರೀದಿ ಮಾಡಿದ ಸಮಯದಲ್ಲಿ ಆಸ್ತಿಯನ್ನು ಅಳತೆ ಮಾಡಿಸಿ ಹದ್ದು ಬಸ್ತು ಮಾಡಿಸಿ ನಂತರ ಆಸ್ತಿಯನ್ನು ಖರೀದಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಪ್ರತಿವಾದಿಯು ತಾವು ಖರೀದಿಸಿದ 1 ಎಕರೆ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನಿನ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಾವಾ ಆಸ್ತಿಯಲ್ಲಿ ಪ್ರತಿವಾದಿ ಯಾವುದೇ ಒತ್ತುವರಿಯನ್ನು ಮಾಡಿರುವುದಿಲ್ಲ, ಆ ಬಗ್ಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಅಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂಬ ತಪ್ಪು ಕಲ್ಪನೆಯಿಂದ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಜೆಎಂಎಫ್‌ಸಿ, ಸಾಗರ